## ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 223/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 26-03-2026 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಯಲ್ಲಪ್ಪ ಸಂತಪ್ಪನವರ | | **ಪ್ರಾ.ಸಾ ಃ 10** |
| **ತಂದೆ ಃ ಗಂಡ ಹೆಸರು** | ಃ ಬಸವಣ್ಣೆಪ್ಪ | | **ಚಾ.ಸಾ ಃ 15** |
| **ವಯಸ್ಸು** | ಃ 48 ವರ್ಷ | | |
| **ಉದ್ಯೋಗ** | ಃ ವ್ಯವಸಾಯ | | |
| **ವಾಸಸ್ಥಳ** | ಃ ತುಮರಿಕೊಪ್ಪ | | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1, 4 ರಿಂದ 14 ರವರ ಪರಿಚಯ ಇದೆ. ಸುಮಾರು 6 ತಿಂಗಳ ಹಿಂದೆ ಚಾಸಾ-14 ರವರು ಮೃತಪಟ್ಟಿದ್ದಾರೆ. ನನಗೆ ಆರೋಪಿತರ ಪರಿಚಯ ಇದೆ.

ಸುಮಾರು 3 ವರ್ಷಗಳ ಹಿಂದೆ ತುಮರಿಕೊಪ್ಪ ಗ್ರಾಮದ ಗುಡಿ ಓಣಿಯ ಅಂಗಡಿಯ ಕಟ್ಟೆ ಮುಂದೆ ನಾನು ಮತ್ತು ಚಾಸಾ-12 ರವರು ಕುಳಿತಿದ್ದೆವು. ಆ ಸಮಯದಲ್ಲಿ ಚಾಸಾ-4 ಮತ್ತು ಆರೋಪಿತರ ಮಧ್ಯ ಗದ್ದಲ ಪ್ರಾರಂಭವಾಗಿರುತ್ತದೆ. ನಾನು ಇಬ್ಬರಿಗೂ ಬೈದು ವಾಪಸ ಕಳುಹಿಸಿರುತ್ತೇನೆ. ಆರೋಪಿತರು ಪುನಃ ಮರಳಿ ಬಂದು ಚಾಸಾ-4 ಹಾಗೂ 12 ರವರ ಜೊತೆ ಜಗಳ ಪ್ರಾರಂಭಿಸಿರುತ್ತಾರೆ. ನಾನು ಪುನಃ ಇಬ್ಬರಿಗೂ ಬೈದು ನ್ಯಾಯ ಬೇಡ ಎಂದು ಕಳುಹಿಸಿಕೊಟ್ಟಿರುತ್ತೇನೆ. ಚಾಸಾ-8 ರವರು ಜಗಳ ಬಿಡಿಸಲು ಹೋದಾಗ ಅವರ ಎದೆಗೆ ಜಗಳದಲ್ಲಿ ಯಾರೂ ಕಲ್ಲಿನಿಂದ ಹೊಡೆದಿರುತ್ತಾರೆ. ಚಾಸಾ-6 ರವರಿಗೆ ಗಾಯವಾಗಿರುತ್ತದೆ. ಜಗಳ ಮಾಡುತ್ತಿದ್ದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆ ಹಾಗೂ ಕಲ್ಲುಗಳನ್ನು ನಾನು ನೋಡಿರುವುದಿಲ್ಲ. ಮುದ್ದೆಮಾಲು-1 ಮತ್ತು 2 ನ್ನು ನೋಡಿ ಸಾಕ್ಷಿ ಗುರುತಿಸಲು ನಿರಾಕರಿಸಿರುತ್ತಾರೆ.

***(ಮಾನ್ಯ ಸ.ಸ.ಅ ಯವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ,** ಪಾಟೀ ಸವಾಲಿಗೆ ಅನುಮತಿಸಿದೆ)*

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 07.03.2023 ರಂದು ಸಂಜೆ 6-30 ಗಂಟೆಗೆ ಚರ್ಚ ಎದುರಿನ ರಸ್ತೆ ಮೇಲೆ ಜಗಳ ಆಗಿತ್ತು ಅಂದರೆ ನಿಜ. 1 ರಿಂದ 9 ನೇ ಆರೋಪಿತರು ಎಲ್ಲರೂ ಸೇರಿಕೊಂಡು ಚಾಸಾ-4 ರವರ ಜೊತೆಗೆ ಜಗಳ ಮಾಡಿ ಹೊಡಿ ಬಡಿ ಮಾಡುತ್ತಿದ್ದರು ಅಂದರೆ ನಿಜ. ನಾನು ಹಾಗೂ ಚಾಸಾ-5 ರಿಂದ 13 ರವರು ಜಗಳ ಬಿಡಿಸಲು ಹೋದಾಗ ಆರೋಪಿತರು ಜಗಳ ಬಿಡಿಸಲು ನೀವು ಯಾರು ಇದರಲ್ಲಿ ಬರಬೇಡಿ ಎಂದು ನಮಗೆ ಅವಾಚ್ಯ ಶಬ್ದಗಳಿಂದ ಬೈದು ಕಳುಹಿಸಿರುತ್ತಾರೆ ಅಂದರೆ ನಿಜ. ಚಾಸಾ-8 ರವರು ತಂಟೆ ಮಾಡಬೇಡರಿ, ಎಲ್ಲರೂ ಸೇರಿಕೊಂಡು ಬಗೆಹರಿಸೋಣ ಎಂದು ಬುದ್ದಿವಾದ ಹೇಳಿದರೂ ಕೂಡಾ ಆರೋಪಿತರು ಕೇಳಲಿಲ್ಲ ಅಂದರೆ ನಿಜ. ಆರೋಪಿತರು ತಮ್ಮ ಕೈಗಳಲ್ಲಿ ಬಡಿಗೆ ಹಾಗೂ ಕಲ್ಲುಗಳನ್ನು ಹಿಡಿದುಕೊಂಡಿದ್ದು 1 ನೇ ಆರೋಪಿ ಚಾಸಾ-8 ರವರಿಗೆ ನಿನಗೆ ಸೊಕ್ಕು ಬಹಳ ಇದೆ ಸೂಳೆಮಗನೆ ಎಂದು ತನ್ನ ಕೈಯಲ್ಲಿದ್ದ ಕಲ್ಲಿನಿಂದ ಎದೆಗೆ ಹೊಡೆದಿರುತ್ತಾನೆ ಅಂದರೆ

ಸರಿಯಲ್ಲ. 2 ನೇ ಆರೋಪಿ ಕೂಡಾ ಚಾಸಾ-8 ರವರಿಗೆ ಕಲ್ಲಿನಿಂದ ಚಾಸಾ-8 ರವರ ಮೇಲೆ ಹಲ್ಲೆ ಮಾಡಿರುತ್ತಾನೆ ಅಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಚಾಸಾ-5 ರವರಿಗೆ 1 ನೇ ಆರೋಪಿ ಕಲ್ಲಿನಿಂದ ಕಾಲಿಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ಸರಿಯಲ್ಲ. ಚಾಸಾ-6 ರವರ ತಲೆಗೆ 2 ನೇ ಆರೋಪಿ ಕಲ್ಲಿನಿಂದ ತಲೆಗೆ ಹೊಡೆದು ರಕ್ತಗಾಯ ಪಡಿಸಿರುತ್ತಾನೆ ಅಂದರೆ ನಿಜ. 5 ನೇ ಆರೋಪಿ ಬಡಿಗೆಯಿಂದ ಚಾಸಾ-11 ರವರ ಮೇಲೆ ಹಲ್ಲೆ ಮಾಡಿರುತ್ತಾನೆ ಅಂದರೆ ಸರಿಯಲ್ಲ. 6 ನೇ ಆರೋಪಿ ಚಾಸಾ-7 ರವರ ಮೇಲೆ ಬಡಿಗೆಯಿಂದ ಹೊಡೆದು ಒಳಪೆಟ್ಟು ಮಾಡಿರುತ್ತಾನೆ ಅಂದರೆ ನಿಜ. 3 ನೇ ಆರೋಪಿ ಚಾಸಾ-9 ರವರಿಗೆ ಬಡಿಗೆಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 4 ನೇ ಆರೋಪಿ ಚಾಸಾ-10 ರವರ ಮೈ ಮೇಲೆ ಬಡಿಗೆಯಿಂದ ಹಲ್ಲೆ ಮಾಡಿ ಒಳಪೆಟ್ಟು ಮಾಡಿರುತ್ತಾನೆ ಅಂದರೆ ಸರಿಯಲ್ಲ. 7 ನೇ ಆರೋಪಿಯು ಚಾಸಾ-12 ರವರ ಮೇಲೆ ತನ್ನ ಕೈಯಲ್ಲಿದ್ದ ಬಡಿಗೆ ಹಾಗೂ ಕೈಯಿಂದ ಹಲ್ಲೆ ಮಾಡಿರುತ್ತಾನೆ ಅಂದರೆ ನಿಜ. 8 ಮತ್ತು 9 ನೇ ಆರೋಪಿತರು ಚಾಸಾ-13 ರವರ ಮೈಮೇಲೆ ತಮ್ಮ ಕೈಗಳಲ್ಲಿ ಇದ್ದ ಬಡಿಗೆ ಹಾಗೂ ಕೈಗಳಿಂದ ಹಲ್ಲೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ಜಗಳ ಬಿಡಿಸಲು ಬಂದ ಚಾಸಾ-1 ರವರ ಮೈಮೇಲೆ ಹಲ್ಲೆ ಮಾಡಿ ಸೀರೆ ಹಿಡಿದು ಎಳೆದಾಡಿ ಮಾನಭಂಗ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನಾನು ಹಾಗೂ ಚಾಸಾ-14 ರವರು ಜಗಳ ಬಿಡಿಸಿಕೊಂಡಿರುತ್ತೇವೆ ಅಂದರೆ ನಿಜ. ಆರೋಪಿತರು ಹೋಗುವಾಗ ಈಗ ಉಳಿದುಕೊಂಡಿದ್ದಿರಿ ಇನ್ನೊಮ್ಮೆ ಸಿಕ್ಕರೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಅಂದರೆ ಸರಿಯಲ್ಲ. ಜಗಳ ಆದ ನಂತರ ಗಾಯಾಳುಗಳು ಕಲಘಟಗಿ ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದಾರೆ ಅಂದರೆ ನಿಜ. ಈ ಬಗ್ಗೆ ಚಾಸಾ-1 ರವರು ಪೋಲೀಸರ ಮುಂದೆ ದೂರು ನೀಡಿದ್ದಾರೆ ಅಂದರೆ ನಿಜ. ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದು ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಅಂದರೆ ನಿಜ. ಆರೋಪಿತರು ಈಗ ನ್ಯಾಯಾಲಯದ ಮುಂದೆ ಇರುವ ಕಲ್ಲುಗಳು ಹಾಗೂ ಬಡಿಗೆಗಳು ಮುದ್ದೆಮಾಲು-1 ಮತ್ತು 2 ರಿಂದ ಹಲ್ಲೆ ಮಾಡಿದ್ದು ನಾನು ಅವುಗಳನ್ನು ಸ್ಥಳದಲ್ಲಿ ನೋಡಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**